ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 149-155
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕದ ದಲಿತ ಚಳವಳಿಯಲ್ಲಿ ದಲಿತ ಸಂಘರ್ಷ ಸಮಿತಿ ರೂಪಿಸಿದ ಹೋರಾಟ ಮತ್ತು ಅದರ ಪರಿಣಾಮಗಳು

**ಆಶಾ**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. ಮಂಗಳೂರು.

**Abstract:**
*ದಲಿತ ಚಳುವಳಿಯನ್ನು ಕರ್ನಾಟಕದಲ್ಲಿ ಕೆಲವರು 12ನೇ ಶತಮಾನದ ವಚನ ಚಳುವಳಿ ಎಂತಲೂ ಗುರುತಿಸುತ್ತಾರೆ. ಆದರೆ ರಾಜಕೀಯ–ಸಮಾಜಶಾಸ್ತ್ರದ ಅಧ್ಯಯನದಿಂದ ನೋಡಿದಾಗ ದಲಿತ ಚಳವಳಿಯು ಸುಮಾರು 19–20ನೇ ಶತಮಾನದಲ್ಲಿ ಕಂಡುಬಂದಿದ್ದು, ಇದು ಬ್ರಾಹ್ಮಣೇತರ ಚಳವಳಿಯಿಂದ ಗುರುತಿಸಿರುವುದನ್ನು ಕಾಣಬಹುದು. ಆದರೆ ಕರ್ನಾಟಕದ ದಲಿತ ಚಳವಳಿಯು ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ನಡೆಯುತ್ತದೆ. ಗೌತಮಬುದ್ಧ, ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ, ಮಹಾತ್ಮ ಜ್ಯೋತಿ ಬಾಪುಲೆ, ಡಾ. ಬಿ.ಆರ್.ಅಂಬೇಡ್ಕರ್, ಮಹಾತ್ಮಾಗಾಂಧಿ, ಲೋಹಿಯಾ, ಜಯಪ್ರಕಾಶ್ ನಾರಾಯಣ ಮತ್ತು ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳವಳಿ, ದ್ರಾವಿಡ ಚಳವಳಿ, ಮೊದಲಾದ ಚಳವಳಿಗಳಿಂದ ಮತ್ತು ತತ್ವಸಿದ್ಧಾಂತಗಳಿಂದ ದಲಿತ ಸಂಘರ್ಷ ಸಮಿತಿ ತನ್ನ ಪ್ರಭಾವ ಬೆಳೆಸಿಕೊಂಡಿದೆ. ಆದರೆ ದಲಿತ ಸಂಘರ್ಷ ಸಮಿತಿ ಚಳವಳಿ ನಂತರ ರೈತ ಚಳವಳಿ ಕರ್ನಾಟಕದಲ್ಲಿ ತನ್ನ ಅಸ್ತಿತ್ವವನ್ನು ಪಡೆದುಕೊಂಡಿರುವುದು ಕಾಣಬಹುದಾಗಿದೆ. ಪ್ರಸ್ತುತ ಈ ಲೇಖನವು ಕರ್ನಾಟಕದ ದಲಿತ ಚಳವಳಿಯಲ್ಲಿ ದಲಿತ ಸಂಘರ್ಷ ಸಮಿತಿ ರೂಪಿಸಿದ ಹೋರಾಟ ಮತ್ತು ಅದರ ಪರಿಣಾಮಗಳ ಕುರಿತು ಚರ್ಚಿಸುತ್ತದೆ*

**Keywords:** *ದಲಿತ ಚಳವಳಿ, ದಲಿತ ಹೋರಾಟ, ದಲಿತ ಸಂಘರ್ಷ ಸಮಿತಿ*

## ಪೀಠಿಕೆ

ದಲಿತ ಚಳುವಳಿ ಸ್ವಾತಂತ್ರ್ಯ ನಂತರದಲ್ಲಿ ಭಾರತದ ಪ್ರತಿಯೊಂದು ರಾಜ್ಯದಲ್ಲೂ ಹುಟ್ಟಿಕೊಂಡು ಸಾರ್ವಜನಿಕರು, ರಾಜಕಾರಣಿಗಳು ಮತ್ತು ಮೇಧಾವಿಗಳ ಗಮನ ಸೆಳೆಯಿತು. 1970ರ ದಶಕದಲ್ಲಿ ಮಧ್ಯಮ ವರ್ಗದ ದಲಿತರು ಚಳವಳಿಯನ್ನು ಪ್ರಾರಂಭಿಸಿ ತಮ್ಮ ಮೇಲಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸತೊಡಗಿದರು. ದಲಿತ ಚಳವಳಿಯು ಪ್ರಜ್ಞಾಪೂರ್ವಕ ಸಾಮಾಜಿಕ ಚಳವಳಿಯಾಗಿದ್ದು ಅದು ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಅಸಮಾನತೆ ಮತ್ತು ವ್ಯವಸ್ಥೆಗಳ ವಿರುದ್ಧ ದಲಿತರನ್ನು ಸಂಘಟಿಸುತ್ತಿದೆ. ಶತಮಾನಗಳ ದಾರಿದ್ರ್ಯ ದಬ್ಬಾಳಿಕೆ ಮತ್ತು ಶೋಷಣೆ ದಲಿತರ ಮೂಲಭೂತ ಸಮಸ್ಯೆಗಳು. ತಮ್ಮ ಸಮಸ್ಯೆಗಳಿಗೆ ದಲಿತರು ಸಂಘಟನೆಯಲ್ಲಿ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದ ಮೇಲಾದರೂ ಭಾರತೀಯ ಸಮಾಜ ತಮ್ಮನ್ನು

**Please cite this article as:** ಆಶಾ. (2024). ಕರ್ನಾಟಕದ ದಲಿತ ಚಳವಳಿಯಲ್ಲಿ ದಲಿತ ಸಂಘರ್ಷ ಸಮಿತಿ ರೂಪಿಸಿದ ಹೋರಾಟ ಮತ್ತು ಅದರ ಪರಿಣಾಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 149–155

ಮನುಷ್ಯರಂತೆ ಕಾಣುತ್ತದೆ. ತಾವು ಕೂಡ ಇನ್ನಿತರರಂತೆ ಸ್ವಾಭಿಮಾನ ಮತ್ತು ನೆಮ್ಮದಿಯ ಬದುಕನ್ನು ನಡೆಸಬಹುದು ಎಂಬುದು ದಲಿತರ ಆಶಯವಾಗಿತ್ತು. ಆದರೆ ಜಾಗತೀಕರಣದ ಹೆಸರಿನಲ್ಲಿ ಆಳುವ ವರ್ಗಗಳು ದಲಿತರ ಸಮಸ್ಯೆಗಳನ್ನು ಇನ್ನಷ್ಟು ಕಗ್ಗಂಟಾಗಿಸಿ ಅವರನ್ನು ಕತ್ತಲೆಯ ಕೂಪಕ್ಕೆ ನೂಕಿವೆ.

**ದಲಿತ ಸಂಘರ್ಷ ಸಮಿತಿ ರೂಪಿಸಿದ ಹೋರಾಟ ಮತ್ತು ಅದರ ಪರಿಣಾಮಗಳು**

ಜಾಗತೀಕರಣದ ಬಳಿಕ ರಾಷ್ಟ್ರ ಪ್ರಜಾಪ್ರಭುತ್ವದ ತನ್ನ ಮೂಲ ರೂಪವನ್ನು ಉಳಿಸಿಕೊಂಡಿದೆಯೇ? ಸಂವಿಧಾನ ದಲಿತರಿಗೆ ನೀಡಿದ ರಕ್ಷಣೆ ಹಾಗೂ ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿದೆಯೇ? ಎನ್ನುವ ಪ್ರಶ್ನೆಗೆ ನಕಾರಾತ್ಮಕ ಉತ್ತರಗಳು ನಮಗೆ ಎದುರಾಗುತ್ತವೆ. ಜಾಗತೀಕರಣದ ಮೊದಲು ಹಾಗೂ ನಂತರದಲ್ಲಿ ದಲಿತ ಸಮುದಾಯದ ಸ್ಥಿತಿ-ಗತಿಯ ಅಂಕಿ ಅಂಶಗಳನ್ನು ಗಮನಿಸಿದಾಗ ಜಾಗತೀಕರಣದ ನಂತರದಲ್ಲಿ ದಲಿತರ ಮೇಲಿನ ಹಿಂಸೆ, ದೌರ್ಜನ್ಯ, ದಬ್ಬಾಳಿಕೆ ಹೆಚ್ಚುತ್ತಿರುವುದು, ಅವರಿಗೆ ಸಿಗಬೇಕಾದ ಸವಲತ್ತುಗಳನ್ನು ನಿರಾಕರಿಸುತ್ತಿರುವುದು ಕಂಡುಬರುತ್ತಿದೆ. ಆದ ಕಾರಣ ದಲಿತರು ತಮ್ಮ ಸೌಲಭ್ಯಗಳನ್ನು ಪಡೆದುಕೊಳ್ಳಲು ಪ್ರಸ್ತುತದಲ್ಲಿ ಹೋರಾಟಕ್ಕೆ ಇಳಿದು ಪಡೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಕರ್ನಾಟಕದಲ್ಲಿನ ದಲಿತರ ಸ್ಥಿತಿ ಅವಲೋಕಿಸಿದರೆ ರಾಜ್ಯದ ಉದ್ದಗಲಕ್ಕೂ ದಲಿತ ಸಂಘರ್ಷ ಸಮಿತಿ ಧ್ವನಿ ಇಲ್ಲದ ಶೋಷಿತರಿಗೆ ಅಪಾರವಾದ ಸ್ವಾಭಿಮಾನವನ್ನು ತಂದುಕೊಟ್ಟಿದೆ. ಇದರಿಂದಾಗಿ ನಿಜವಾದ ಚಳುವಳಿ ಇನ್ನೂ ಜೀವಂತವಾಗಿರುವುದನ್ನು ನಾವು ಕಾಣುತ್ತೇವೆ. ದಲಿತ ಸಂಘರ್ಷ ಸಮಿತಿಯಂತಹ ತಾಯಿ ಬೇರು ಸಂಘಟನೆಯಿಂದ ಬಹಳ ಜನನಾಯಕರು ಸೃಷ್ಟಿಯಾಗಿದ್ದಾರೆ ಅವರೆಲ್ಲ ತಮ್ಮ ಶ್ರಮದ ಜೊತೆ ಬದುಕಿನ ತ್ಯಾಗ, ಬಲಿದಾನವನ್ನು ಸಂಘಟನೆಗೆ ಅರ್ಪಿಸಿದ್ದಾರೆ. ಇವತ್ತಿನ ಜಾಗತಿಕ ನೆಲೆಯಲ್ಲಿ ದಲಿತರ ಸ್ಥಿತಿ ಹೇಗಿದೆ ಎಂದು ನೋಡಿದರೆ ದಲಿತ ಹಿರಿಯ ನಾಯಕರಿಗಿಂತಲೂ ಅಪಾರವಾದ ಸವಾಲುಗಳನ್ನು ಯುವ ನಾಯಕರು ಎದುರಿಸುತ್ತಿದ್ದಾರೆ. ಯುವ ಶಕ್ತಿ ಎತ್ತ ಸಾಗುತ್ತಿದೆ. ಯುವಶಕ್ತಿ ಬಳಕೆಯನ್ನು ಹೇಗೆ ನಿರ್ವಹಿಸಬೇಕೆಂದು ಹಿರಿಯ ನಾಯಕರಿಗೆ ಗೊತ್ತೇ ಇಲ್ಲಾ ಏಕೆಂದರೆ ಯುವ ನಾಯಕತ್ವ ಬೆಳೆಯದೇ ಹೋದರೆ ಹೋರಾಟದ ಚಾಲನೆಯ ವೇಗ ಕಡಿಮೆಯಾಗುತ್ತಾ ಬದಲಾವಣೆ ಎಂಬುದು ಅಸಾಧ್ಯವಾಗಿ ಕಾಣುತ್ತದೆ. ಇದೇ ಮುಂದೆ ಹೆಮ್ಮರವಾದ ಬಿಕ್ಕಟ್ಟು ಆಗಲೂಬಹುದು. ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ಕೋಮುವಾದೀಕರಣಗಳನ್ನು ಸಮರ್ಥವಾಗಿ ಎದುರಿಸಲು ನಿಷ್ಠೆ ಇರುವ ಯುವಶಕ್ತಿ ದೊರೆಯುವುದಿಲ್ಲ. ಆದ್ದರಿಂದ ಯುವಶಕ್ತಿಗಳೊಟ್ಟಿಗೆ ಮುಂದೆ ಸಾಗಬೇಕಾಗಿದೆ. ಹಿರಿಯ ಸಲಹೆ ಸುಚನೆಗಳಿಗೆ ಮಾತ್ರ ಸೀಮಿತವಾಗಬೇಕಾದ ಅನಿವಾರ್ಯತೆ ಇಂದು ಸೃಷ್ಟಿಯಾಗಿದೆ. ಇಲ್ಲದಿದ್ದರೆ ರಿಯಲ್ ಎಸ್ಟೇಟಿನ ಹೆಸರಿನಲ್ಲಿ ತಮ್ಮ ಹಿತಕ್ಕಾಗಿ ಭೂಮಾಫಿಯಾಗಳ ಜೊತೆ ಯುವಶಕ್ತಿ ಕೈಜೋಡಿಸಿ ಮುಂದೆ ಸಣ್ಣ, ಅತಿ ಸಣ್ಣ ಬಡ ರೈತರು ಭೂಮಿ ಕಳೆದುಕೊಂಡು ತಮ್ಮ ಭೂಮಿ ಮಾರಿ ಮಾರಾಟ ಮಾಡಿದವನ ಹತ್ತಿರ ಗುಲಾಮನಾಗಿ ದುಡಿಯುವ ಕಾಲ ದೂರವಿಲ್ಲ.

**ಮೀಸಲಾತಿ ಮೊಟಕುಗೊಳಿಸಿದ ಸರ್ಕಾರದ ವಿರುದ್ಧ ರಾಜ್ಯಾದಾದ್ಯಂತ ಬೃಹತ್ ಪ್ರತಿಭಟನೆ**

ಫೆಬ್ರುವರಿ 22, 1999 ರಂದು ಪಟೇಲ್ ಸರ್ಕಾರದ ಮೀಸಲಾತಿ ನೀತಿ ವಿರೋಧಿ ಧೋರಣೆಯನ್ನು ಖಂಡಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಲಿತ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಮೀಸಲಾತಿ ಸಂರಕ್ಷಣಾ ಸಮಿತಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್

ಪ್ರತಿಭಟನೆ ನಡೆಸಿ ಪಟೇಲ್ ಪ್ರತಿಕೃತಿಯನ್ನು ದಹಿಸಲಾಯಿತು.[1]

ಸಂವಿಧಾನದ ನೀತಿ ನಿಯಮಗಳಿಗೆ ಒಳಪಟ್ಟು, ಸುಪ್ರೀಂ ಕೋರ್ಟಿನ ಆದೇಶಗಳಿಗೆ ಅನುಗುಣವಾಗಿ ಜಾರಿಯಲ್ಲಿದ್ದ ಮೀಸಲಾತಿ ನಿಯಮಗಳನ್ನು ಬದಲಿಸುವ ಮೂಲಕ ಪಟೇಲ್ ಸರ್ಕಾರ ಪ.ಜಾತಿ, ಪಂಗಡಗಳ ಹಿತವನ್ನು ಹೊಸಕಿ ಹಾಕಿದೆ. ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 21 ಎಸ್‌ಬಿಸಿ 97 ದಿನಾಂಕ: 3–2–99 ಹೊರಡಿಸುವ ಮೂಲಕ ತಾನು ಸಾಮಾಜಿಕ ನ್ಯಾಯ ವಿರೋಧಿ ಎಂದು ಈ ಸರ್ಕಾರ ಎಡವಿದೆ. ಮೀಸಲಾತಿ ವಿಚಾರದಲ್ಲಿ ಪಟೇಲ್ ಸರ್ಕಾರ ತೋರಿರುವ ಧಾರ್ಷ್ಟ್ಯವನ್ನು ಪ್ರತಿಯೊಬ್ಬರೂ ಪ್ರಶ್ನಿಸಬೇಕಾಗಿದೆ. ಈಗ ಹೊರಡಿಸಲಾಗಿರುವ ಆದೇಶದಂತೆ ಮೀಸಲಾತಿ ನೀತಿಯನ್ನೇ ಧಿಕ್ಕರಿಸಿದಂತಾಗಿದೆ. ಸುಪ್ರೀಂ ಕೋರ್ಟಿನ ಆದೇಶವನ್ನು ಉಲ್ಲಂಘಿಸಿದಂತಾಗಿದೆ ಹಾಗೂ ದಲಿತರ ಕಾನೂನುಬದ್ಧ ಮೀಸಲಾತಿ ಪ್ರಮಾಣವನ್ನು ಮೊಟಕುಗೊಳಿಸಲಾಗಿದೆ. ಭಕ್ತರಾಮೇಗೌಡ ವಿರುದ್ಧ ಕರ್ನಾಟಕ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶವನ್ನು ಕಡೆಗಣಿಸಲಾಗಿದೆ. ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ವರ್ಗಗಳನ್ನೂ ವಂಚಿಸಲಾಗಿದೆ ಎಂದು ಪ್ರತಿಭಟಿಸಲಾಯಿತು.

**ಅಂಬೇಡ್ಕರ್ ದಿನಾಚರಣೆಯ ಮೂಲಕ ಹಕ್ಕೊತ್ತಾಯ**

ಡಾ. ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ದಿನಾಂಕ ಏಪ್ರಿಲ್ 25, 2006ನೇ ಮಂಗಳವಾರ ಆಚರಿಸಿ ಅದರ ಪ್ರಯುಕ್ತ ಪುರಭವನ ಉದ್ಯಾನದಲ್ಲಿರುವ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬಳಿಕ ಪ್ರತಿಭಟನೆ ಹಾಗೂ ವಿಚಾರ ಸಂಕಿರಣ ನಡೆಸಿದರು. ಕಾರ್ಯಕ್ರಮವನ್ನು ಆಗಿನ ರಂಗಾಯಣದ ನಿರ್ದೇಶಕರಾಗಿದ್ದ ಚಿದಂಬರ ರಾವ್ ಜಂಬೆಯವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ದಸಂಸ ರಾಜ್ಯ ಸಂಚಾಲಕರಾದ ಎನ್.ವೆಂಕಟೇಶ್ ಹಾಗೂ ರಾಜ್ಯ ರೈತ ಸಂಘದ ಉಪಾಧ್ಯಕ್ಷರು ಹಾಗೂ ಅರ್ಥಶಾಸ್ತ್ರಜ್ಞರೂ ಆದ ಕೆ.ಸಿ ಬಸವರಾಜು ಅವರು ಭಾಗವಹಿಸಿದ್ದರು. ವಿಶೇಷ ಆಹ್ವಾನಿತರಾಗಿ ದಸಂಸದ ರಾಜ್ಯ ಸಂಘಟನಾ ಸಂಚಾಲಕರಾದ ಗುರುಪ್ರಸಾದ್ ಕೆರಗೋಡು ಹಾಗೂ ಎಂ.ಬಿ.ಶ್ರೀನಿವಾಸ್ ಆಗಮಿಸಿದ್ದರು. ಈ ಕಾರ್ಯಕ್ರಮದ ಮೂಲಕ ಸರ್ಕಾರಕ್ಕೆ ಈ ಕೆಳಗಿನ ಹಕ್ಕೊತ್ತಾಯಗಳನ್ನು ಮಾಡಲಾಯಿತು. 1. ಗುತ್ತಿಗೆ ಕಾಮಗಾರಿಯ ಮಿತಿಯನ್ನು ಒಂದು ಲಕ್ಷದಿಂದ 5 ಲಕ್ಷಕ್ಕೆ ಹೆಚ್ಚಿಸಬೇಕು 2. ಮಾರಾಟ ಮತ್ತು ಸರಬರಾಜಿನಲ್ಲೂ ಪಾಲುದಾರಿಕೆ ಇರಬೇಕು. 3. ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಅನುಷ್ಠಾನಗೊಳಿಸಬೇಕು. ಆಶ್ರಯ, ಅಂಬೇಡ್ಕರ್ ಮುಂತಾದ ವಸತಿ ಯೋಜನೆಗಳಲ್ಲಿ ಈಗಿನ ಇಪ್ಪತ್ತೈದು ಸಾವಿರಕ್ಕೆ ಬದಲಾಗಿ ಒಂದು ಮನೆಗೆ ನಲವತ್ತು ಸಾವಿರ ರೂಪಾಯಿಗಳನ್ನು ಕೊಡಬೇಕು. ಕಾರ್ಯಕ್ರಮದ ಬಳಿಕ ಅಂದೇ ಹಕ್ಕೊತ್ತಾಯ ಪತ್ರದ ಮನವಿಯೊಂದನ್ನು ತಯಾರಿಸಿ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಿಗೆ ಮೈಸೂರಿನ ಜಿಲ್ಲಾಧಿಕಾರಿಗಳ ಮೂಲಕ ತಲುಪಿಸಲಾಯಿತು. 'ಕರ್ನಾಟಕ ರಾಜ್ಯದಲ್ಲಿ ದಲಿತರು ಸಾಮಾಜಿಕ, ಆರ್ಥಿಕ ಹಾಗೂ ಇತರೆ ರಂಗಗಳಲ್ಲಿ ತೀರಾ ಹಿಂದುಳಿದ ಜನಾಂಗವಾಗಿದ್ದು, ಈ ಜನಾಂಗವನ್ನು ಮುಖ್ಯವಾಹಿನಿಗೆ ತರಲು ಸಂವಿಧಾನ ಹಾಗೂ ಸರ್ಕಾರಗಳು ಅನೇಕ ಕಾರ್ಯಕ್ರಮಗಳ ಮೂಲಕ ಮೀಸಲಾತಿ ಕಲ್ಪಿಸಿರುವುದು ಸರಿಯಷ್ಟೆ. ಆದರೆ ಈ ಕಾರ್ಯಕ್ರಮಗಳು ಹಾಗೂ ಮೀಸಲಾತಿ ಇಂದಿನ ಜಾಗತೀಕರಕಣ, ಖಾಸಗೀಕರಣದ ಹಿನ್ನಲೆಯಲ್ಲಿ ಅರ್ಥ ಕಳೆದುಕೊಂಡಿದ್ದು, ಈ ರಾಜ್ಯದ ಬಹುದೊಡ್ಡ ಜನಸಮೂಹ ಎಲ್ಲ ಸವಲತ್ತುಗಳಿಂದ ವಂಚಿತಗೊಂಡು ಇಂದಿನ ಸ್ಪರ್ಧಾತ್ಮಕ ಸಮಾಜದಲ್ಲಿ ನೆಲೆ ಕಳೆದುಕೊಳ್ಳುವ ಭೀತಿಯಲ್ಲಿವೆ. ಇಂತಹ ಸಂದಿಗ್ಧತೆಯಲ್ಲಿ ದಲಿತರ ಪಾಲು ಅನ್ಯರ ಪಾಲಾಗುತ್ತಿದೆ. ಆದ್ದರಿಂದ ಆಳುವ ಸರ್ಕಾರಗಳು ವಾಸ್ತವಿಕ ನೆಲೆಗಟ್ಟಿನಲ್ಲಿ ಈ ಜನವರ್ಗದ ಸಮಸ್ಯೆಗಳ ಬಗ್ಗೆ ಗಂಭೀರ ಚಿಂತನೆ ನಡೆಸಿ, ಇವರನ್ನು

ಆರ್ಥಿಕವಾಗಿ ಸಬಲರನ್ನಾಗಿ ಮಾಡಬೇಕಾದ ನೈತಿಕ ಹೊಣೆ ಇದೆ. ಈ ನಿಟ್ಟಿನಲ್ಲಿ ದಲಿತ ಸಂಘರ್ಷ ಸಮಿತಿಯು ಕಳೆದ ಮೂರು ವರ್ಷಗಳಿಂದ ಮಧ್ಯಪ್ರದೇಶದ ಮಾದರಿಯಲ್ಲಿ ಆರ್ಥಿಕ ಕ್ಷೇತ್ರಗಳಲ್ಲಿ ದಲಿತರ ಪಾಲುದಾರಿಕೆಗಾಗಿ ಒತ್ತಾಯಿಸಿ ಹಲವಾರು ಕಾರ್ಯಕ್ರಮಗಳ ಮೂಲಕ ಸರ್ಕಾರದ ಗಮನ ಸೆಳೆಯುತ್ತಲಿದೆ. ಆದರೂ ಕೂಡ ಸರ್ಕಾರ ಈ ನಿಟ್ಟಿನಲ್ಲಿ ಮೀನಾಮೇಷ ಎಣಿಸುತ್ತಿರುವುದು ವಿಷಾದದ ಸಂಗತಿ. ಈ ಹಿನ್ನಲೆಯಲ್ಲಿ ದಲಿತ ಸಂಘರ್ಷ ಸಮಿತಿ ರಾಜ್ಯಮಟ್ಟದ ಕಾರ್ಯಕ್ರಮದಡಿ ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ ಬೃಹತ್ ಪ್ರತಿಭಟನೆ ಹಾಗೂ ವಿಚಾರ ಸಂಕಿರಣದ ಮೂಲಕ ಸರ್ಕಾರದ ಗಮನ ಸೆಳೆದು ಹಕ್ಕೊತ್ತಾಯಗಳ ಈಡೇರಿಕೆಗೆ ಆಗ್ರಹಿಸುತ್ತದೆ ಎಂದು ಮುದ್ರಿಸಲಾಗಿತ್ತು.[2]

**ಯಶಸ್ಸು ಪಡೆದ ಹೋರಾಟದ ದಿಕ್ಕು**

ಅಂಬೇಡ್ಕರ್ ದಿನಾಚರಣೆಯ ನೆನಪಿನಾರ್ಥ **'ಆರ್ಥಿಕ ಕ್ಷೇತ್ರದಲ್ಲಿ ಶೋಷಿತ ಸಮುದಾಯದ ಪಾಲುದಾರಿಕೆ'** ಎಂಬ ಶೀರ್ಷಿಕೆಯಲ್ಲಿ ವಿಚಾರ ಸಂಕಿರಣ ನಡೆಸಿ ಆಳುವ ವರ್ಗದ ವಿರುದ್ಧ ಪ್ರತಿಭಟನೆಯನ್ನು ಸಹ ನಡೆಸಿದರು. ಮಧ್ಯಪ್ರದೇಶದ ಭೋಪಾಲ್ ಘೋಷಣೆಯ ಮಾದರಿಯಲ್ಲಿ ಕರ್ನಾಟಕದಲ್ಲೂ ಆಗಲಿ ಎಂಬ ಒತ್ತಾಯ ಇಡೀ ದಸಂಸದ ಬೇಡಿಕೆಯಾಗಿತ್ತು. ಈ ಹಿನ್ನಲೆಯಲ್ಲಿ ಆಗಿನ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ ಕೃಷ್ಣ ಅವರ ಸರ್ಕಾರವು ದಸಂಸದ ಪ್ರಮುಖ ಹೋರಾಟಗಾರರ ಸಮಿತಿಯೊಂದನ್ನು ರಚಿಸಿ ಮಧ್ಯಪ್ರದೇಶಕ್ಕೆ ಕಳುಹಿಸಿಕೊಟ್ಟಿತು. ಆ ಸಮಿತಿಯಲ್ಲಿ ಸಿ.ಎಂ.ಮುನಿಯಪ್ಪ, ಎನ್.ವೆಂಕಟೇಶ್, ಹರಿಹರ ಆನಂದಸ್ವಾಮಿ, ಕೆರಗೋಡು ಗುರುಪ್ರಸಾದ್, ಇಂದೂಧರ ಹೊನ್ನಾಪುರ ಇದ್ದರು. ಈ ತಂಡವು ಮಧ್ಯಪ್ರದೇಶಕ್ಕೆ ತೆರಳಿ ಅಲ್ಲಿನ ಮುಖ್ಯಮಂತ್ರಿಯಾಗಿದ್ದ ದಿಗ್ವಿಜಯ್ ಸಿಂಗ್ ಅವರನ್ನು ಭೇಟಿ ಮಾಡಿ ಆರ್ಥಿಕ ಅಜೆಂಡಾಗಳ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಕರ್ನಾಟಕಕ್ಕೆ ತಲುಪಿಸಿತು. ಈ ತಂಡವು ನೀಡಿದ ವರದಿಯನ್ನು ಬಳಿಕ ಆಗಿನ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಾಗಿದ್ದ ಕೆ.ಶಿವರಾಮ್ ಅವರ ಜವಾಬ್ದಾರಿಯಲ್ಲಿ ಅಂದಿನ ಸರ್ಕಾರಕ್ಕೆ ಮಂಡಿಸಲಾಯಿತು. ಈ ಕಾರಣದಿಂದಾಗಿ ಎಲ್ಲಾ ಹರಾಜು ಹಾಗೂ ಗುತ್ತಿಗೆ ಕಾಮಗಾರಿಯ ಮಿತಿಯನ್ನು ಹಿಂದೆ ಇದ್ದ ಒಂದು ಲಕ್ಷದಿಂದ ಎರಡು ಲಕ್ಷಕ್ಕೆ ಸರ್ಕಾರ ಹೆಚ್ಚಿಸಿತು, ಎರಡು ಲಕ್ಷದ ಒಳಗಿನ ಎಲ್ಲಾ ಹರಾಜು ಹಾಗೂ ಗುತ್ತಿಗೆಯಲ್ಲಿ ಮೀಸಲಾತಿ ಕಡ್ಡಾಯ ಎಂಬ ಸರ್ಕಾರಿ ಆದೇಶ ಹೊರಡಿಸಿತು. ಪ್ರಸ್ತುತ ಈಗ ನಮ್ಮ ಆರಂಭಿಕ ಬೇಡಿಕೆಯಂತೆಯೇ ಇದನ್ನು 5 ಲಕ್ಷಕ್ಕೆ ಏರಿಸಲಾಗಿದೆ[3]. ಇದು ದಸಂಸ ರೂಪಿಸಿದ ಹೋರಾಟದ ಶ್ರಮಕ್ಕೆ ಸಿಕ್ಕ ಪ್ರತಿಫಲವಾಗಿದೆ.

**ಮೀಸಲಾತಿಗಾಗಿ ತಮಟೆ ಚಳವಳಿ**

ದಿನಾಂಕ ಜೂನ್ 5, 2006ರ ಸೋಮವಾರ ದಲಿತರು ಮತ್ತು ಹಿಂದುಳಿದವರ ಮೀಸಲಾತಿಗಾಗಿ ಆಗ್ರಹಿಸಿ ತಮಟೆ ಚಳವಳಿ ನಡೆಸಲಾಯಿತು. ಅಂದು ಮಧ್ಯಾಹ್ನ ಪುರಭವನದಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ಮೆರವಣಿಗೆ ಹೊರಟು ಹಕ್ಕೊತ್ತಾಯದ ಮನವಿಯನ್ನು ಸಲ್ಲಿಸಲಾಯಿತು. ಇದರಲ್ಲಿ ದೇವನೂರ ಮಹದೇವ, ಶ್ರೀನಿವಾಸಪ್ರಸಾದ್, ಕೆ.ಎಸ್ ಪುಟ್ಟಣ್ಣಯ್ಯ, ಇಂದೂಧರ ಹೊನ್ನಾಪುರ, ಗುರುಪ್ರಸಾದ್ ಕೆರೆಗೋಡು, ಎಂ.ಬಿ ಶ್ರೀನಿವಾಸ್, ಬೆಟ್ಟಯ್ಯಕೋಟೆ ಭಾಗವಹಿಸಿದರು. ಅಂದಿನ ಕಾರ್ಯಕ್ರಮಕ್ಕೆ ರೂಪಿಸಿದ ಕರಪತ್ರದಲ್ಲಿ ದೇವನೂರು ಮಹದೇವರವರು ಬರೆದಿರುವ ಹುಟ್ಟಿಗೂ ಪ್ರತಿಭೆಗೂ ಜಾತಿಗೂ ಏನೇನೋ ಸಂಬಂಧ ಇಲ್ಲದಿರುವುದನ್ನು ಕಾಣುವಷ್ಟಾದರೂ ಪ್ರತಿಭೆ ಭಾರತಕ್ಕೆ ಇನ್ನೂ ಬರಲಿಲ್ಲ. ದಲಿತರನ್ನು, ಹಿಂದುಳಿದವರನ್ನು ಹಳ್ಳಿಗರನ್ನು, ಕಾರ್ಮಿಕರನ್ನು ವಂಚಿಸುವ ಬುದ್ಧಿಯೇ ಭಾರತದಲ್ಲಿ ಪ್ರತಿಭೆ ಅನಿಸಿಕೊಂಡುಬಿಟ್ಟಿದೆ. ಎನ್ನುವ ಮಾತುಗಳನ್ನು ಬಳಸಿಕೊಳ್ಳಲಾಯಿತು. ಅಲ್ಲದೆ ಇಡೀ ಕರಪತ್ರದಲ್ಲಿ ಮೀಸಲಾತಿಯ ಅಗತ್ಯದ ಬಗ್ಗೆ ಹಾಗೂ ಅದರ ಅಳವಡಿಕೆಯ ಬಗೆಗೆ ದಾಖಲಿಸಲಾಗಿತ್ತು.

ಉನ್ನತ ಶಿಕ್ಷಣದಲ್ಲಿ ಹಿಂದುಳಿದವರಿಗೆ ಶೇ.27 ಮೀಸಲಾತಿ, ಖಾಸಗಿ ಕ್ಷೇತ್ರದಲ್ಲಿ ದಲಿತರಿಗೆ ಮೀಸಲಾತಿ ನೀಡುವ ಪ್ರಸ್ತಾಪ ಆಗುತ್ತಿದ್ದಂತೆಯೇ ದೇಶಾದ್ಯಂತ ಮೀಸಲಾತಿ ವಿರೋಧಿ ಚಳವಳಿ ಪ್ರಾರಂಭವಾಗಿದೆ. ಮೀಸಲಾತಿಯಿಂದ ಪ್ರತಿಭಫಲಾಯನವಾಗುತ್ತದೆ, ದಕ್ಷತೆ, ಪ್ರಗತಿಗೆ ಹಿನ್ನಡೆಯಾಗುತ್ತದೆ ಎಂದು ಮೀಸಲಾತಿ ವಿರೋಧಿಗಳು ಬೊಬ್ಬೆ ಹಾಕುತ್ತಿದ್ದಾರೆ. ಇದೇ ವೇಳೆ ಉನ್ನತ ಶಿಕ್ಷಣದಲ್ಲಿ ವಂತಿಗೆ, ಕಾಂಪಿಟೇಷನ್, ಮ್ಯಾನೇಜ್‌ಮೆಂಟ್ ಕೋಟಾ, ಅನಿವಾಸಿ ಭಾರತೀಯರಿಗೆ ಶೇ.15ರಷ್ಟು ಸೀಟು ಹಂಚಿಕೆ ಈ ಬಗ್ಗೆ ಮೀಸಲಾತಿ ವಿರೋಧಿಗಳು ಚಕಾರ ಎತ್ತಿರುವುದಿಲ್ಲ. ಏಕೆಂದರೆ ಇವರೆಲ್ಲರೂ ಶ್ರೀಮಂತರೂ ಹಾಗೂ ಮೇಲ್ಜಾತಿಗೆ ಸೇರಿದವರಾಗಿದ್ದಾರೆ. ಹೀಗೆ ಲಕ್ಷ ಲಕ್ಷ ರೂಪಾಯಿ ಕೊಟ್ಟವರಿಗೆ, ಅನಿವಾಸಿ ಭಾರತೀಯರಿಗೆ ಮೀಸಲಾತಿ ಕೊಟ್ಟು ಇವರಿಗಿಂತಲೂ ಅಧಿಕ ಅಂಕ ಗಳಿಸಿದ ದಲಿತ, ಹಿಂದುಳಿದ ವಿದ್ಯಾರ್ಥಿಗಳಿಗೆ ಈ ನೆಲದ ಮಕ್ಕಳಿಗೆ ಮೀಸಲಾತಿ ನಿರಾಕರಣೆ ಎಷ್ಟು ನ್ಯಾಯ ಸಮ್ಮತ? ಹಾಗಾದರೇ ಮೆರಿಟ್ ಎಂದರೆ ದುಡ್ಡು, ಮೆರಿಟ್ ಎಂದರೆ ಜಾತಿಯೇ, ಮೀಸಲಾತಿ ವಿರೋಧಿಸುವ ಮಂದಿ ಈ ಪ್ರಶ್ನೆಗಳಿಗೆ ಉತ್ತರಿಸಬೇಕಿದೆ ಎಂಬುದಾಗಿ ಕರಪತ್ರದಲ್ಲಿ ಮುದ್ರಿಸಲಾಗಿತ್ತು. ಮುಖ್ಯವಾಗಿ ಅಂದಿನ ತಮಟೆ ಚಳವಳಿಯಲ್ಲಿ ಎರಡು ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು. ಮೊದಲನೇಯದು ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಅನುಷ್ಠಾನಗೊಳ್ಳಲಿ ಎಂಬುದು ಹಾಗೂ ಉನ್ನತ ಶಿಕ್ಷಣದಲ್ಲಿ ಹಿಂದುಳಿದವರಿಗೆ ಶೇ.27ರಷ್ಟು ಮೀಸಲಾತಿ ಈ ಶೈಕ್ಷಣಿಕ ವರ್ಷದಿಂದಲೇ ಜಾರಿಗೆಬರಲಿ[4]. ಈ ಎರಡು ಹಕ್ಕೊತಾಯಗಳನ್ನು ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಕಳುಹಿಸಲಾಯಿತು.

**ಸಾಮಾಜಿಕ ನ್ಯಾಯಪರ ನಿಲುವು**

ಮೀಸಲಾತಿ ಎನ್ನುವ ಪರಿಕಲ್ಪನೆಯು ಭಾರತದ ಸಂದರ್ಭದಲ್ಲಿ ತುಂಬಾ ಚರ್ಚಿತವಾಗುವ ವಿಷಯ. ಶತಶತಮಾನಗಳ ಅಸಮಾನತೆಯನ್ನು ತೊಡೆದು ಹಾಕಲು ಹಾಗೂ ಪ್ರಜಾಸತ್ತಾತ್ಮಕವಾದ ಸಮಾನತೆಯ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಕಾಲಕಾಲಕ್ಕೆ ಹೋರಾಟದ ಮೂಲಕ ರೂಪುಗೊಂಡದ್ದು ಮೀಸಲಾತಿ. ಇದು ಭಾರತದ ಸಂವಿಧಾನದಲ್ಲಿ ಜಾರಿಗೊಂಡ ಬಳಿಕ ಇಡೀ ದೇಶಾದ್ಯಂತ ಒಂದು ಹೊಸ ಸಂಚಲನವನ್ನು ಉಂಟುಮಾಡಿತು. ಆದರೆ ಕೆಲವು ಸನಾತನವಾದಿ ಹಾಗೂ ಅಸಮಾನತೆಯನ್ನೇ ಒಪ್ಪಿಕೊಂಡ ಅಮಾನವೀಯ ಮನಸ್ಸುಗಳು ಮೀಸಲಾತಿಯನ್ನು ಕಾಲದಿಂದಲೂ ವಿರೋಧಿಸುತ್ತಲೇ ಬಂಧಿವೆ ಮಾತ್ರವಲ್ಲ, ಮೀಸಲಾತಿಯನ್ನು ಸಂಪೂರ್ಣ ನಿರ್ನಾಮಗೊಳಿಸುವ ಮೂಲಕ ಕೇವಲ ಕೆಲವೇ ಸಮುದಾಯಗಳಿಗೆ ಅವಕಾಶ ಹಾಗೂ ಸವಲತ್ತುಗಳು ಸಿಗುವಂತೆ ಮಾಡುತ್ತಿವೆ. ಅದರ ಇನ್ನೊಂದು ಸ್ವರೂಪವೇ ಉನ್ನತ ಶಿಕ್ಷಣದಲ್ಲಿ ಇತರೆ ಹಿಂದುಳಿದವರಿಗೆ ನೀಡಿದ ಮಿಸಲಾತಿಯನ್ನು ವಿರೋಧಿಸುವ ಮನೋಭಾವ. ಇಂತಹ ಮನಸ್ಥಿತಿಯನ್ನು ವಿರೋಧಿಸಿ ತಮಟೆ ಚಳುವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ಖಾಸಗಿ ಕ್ಷೇತ್ರಗಳಲ್ಲೂ ಮೀಸಲಾತಿಯ ಅನುಷ್ಠಾನಕ್ಕಾಗಿ ಒತ್ತಾಯಿಸುವ ದಸಂಸದ ಧ್ವನಿಯಂತೆಯೇ ರಾಜ್ಯದ ಇತರ ದಲಿತ ಸಂಘರ್ಷ ಸಮಿತಿಯ ಬಣಗಳು ಬೇರೆ ಬೇರೆ ಸಂದರ್ಭಗಳಲ್ಲಿ ಧ್ವನಿ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಲ್ಲದೆ ಇದರ ಪರ ವಿರೋಧ, ಚರ್ಚೆ, ಸಂವಾದಗಳು ಇಡೀ ರಾಷ್ಟ್ರಾದ್ಯಂತ ನಡೆಯಿತು. ದಲಿತ ಮೀಸಲಾತಿಗೆ ಮಾತ್ರವಲ್ಲ ದಲಿತೇತರರ ಮೀಸಲಾತಿ ಪರವಾಗಿಯೂ ಸಾಮಾಜಿಕ ನ್ಯಾಯದ ಕೂಗನ್ನು ಹೊರಡಿಸುವ ಮೂಲಕ ದಸಂಸ ಎಲ್ಲಾ ಹಿನ್ನೆಲೆಯ ತಳ ಸಮುದಾಯಗಳ ಧ್ವನಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿತು[5]. ಹಾಗೆಯೇ ಇಡೀ ವಿಷಯಕ್ಕೆ ಪೂರಕವಾಗಿ ಬೆಂಗಳೂರಿನ 'ಯವನಿಕಾ' ಸಭಾಂಗಣದಲ್ಲಿ ದೊಡ್ಡ ಮಟ್ಟದ ವಿಚಾರ ಸಂಕಿರಣವನ್ನು ಕೂಡ ನಮ್ಮ ದಸಂಸದ ರಾಜ್ಯ

ಸಮಿತಿಯು ಹಮ್ಮಿಕೊಂಡಿತ್ತು. ಅಲ್ಲಿಗೆ ಅಮೆರಿಕಾದ ವಿದ್ವಾಂಸರೊಬ್ಬರು ಬಂದು ಆ ನೆಲದಲ್ಲಿ ಕಪ್ಪು ಜನಸಮುದಾಯಕ್ಕೆ ನೀಡುವ ಮೀಸಲಾತಿಯ ಸ್ವರೂಪದ ಬಗೆಗೆ ವಿಚಾರ ಮಂಡಿಸಿದರು.

**ಸಮಾನ ಶಿಕ್ಷಣಕ್ಕಾಗಿ ಹೋರಾಟ**

ಶಿಕ್ಷಣವು ವ್ಯಾಪಾರೀಕರಣ ಹೊಂದುವುದು ಬಹಳ ಅಪಾಯಕಾರಿಯಾದುದು. ಅಲ್ಲದೆ ಶಿಕ್ಷಣದಲ್ಲಿ ತಾರತಮ್ಯ ತಲೆದೋರಿರುವುದು ಇನ್ನಷ್ಟು ಅಸಮಾನತೆಯನ್ನು ಸಮಾಜದಲ್ಲಿ ಉಂಟು ಮಾಡುತ್ತದೆ. ಈ ಹಿನ್ನಲೆಯಲ್ಲಿ ಮೈಸೂರು ಜಿಲ್ಲಾ ಶಾಖೆಯು ದಿನಾಂಕ 11.5.2009ರಂದು ಜಿಲ್ಲಾಧಿಕಾರಿಗಳ ಕಛೇರಿ ಎದುರು 'ಶಿಕ್ಷಣ ವ್ಯಾಪಾರೀಕರಣ' ವಿರೋಧಿಸಿ 'ಸರ್ವರಿಗೂ ಸಮಾನ ಶಿಕ್ಷಣ'ಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಿತು. ಇದಕ್ಕಾಗಿ ತಂದ ಕರಪತ್ರದಲ್ಲಿ ಭಾರತದಲ್ಲಿ ಶೈಕ್ಷಣಿಕ ಅಸಮಾನತೆಯ ಆಯಾಮಗಳನ್ನು ಜನರಿಗೆ ಅರ್ಥವಾಗುವಂತೆ ಸರಳವಾಗಿ ಮುದ್ರಿಸಿದ್ದವು. ಕರಪತ್ರದಲ್ಲಿ "ಭಾರತದ ಇತಿಹಾಸದಲ್ಲಿ ಕೇವಲ ಪುರೋಹಿತಶಾಹಿ ವರ್ಗಕ್ಕೆ ಸೀಮಿತವಾಗಿ ಗೌಪ್ಯವಾಗಿದ್ದ ವಿದ್ಯೆಯನ್ನು ಸಾರ್ವತ್ರೀಕರಣಗೊಳಿಸಿದ ಸ್ವತಂತ್ರ್ಯ ಪೂರ್ವದ ಕ್ರೈಸ್ತಮಿಷನರಿಗಳು ಪ್ರಜ್ಞಾವಂತ ಶಿಸ್ತಿನ ಯುವ ಪೀಳಿಗೆಯನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದವು. ಇದರಿಂದ ಪ್ರೇರಿತರಾದ ದೇಶೀಯ ರಾಜರುಗಳು, ಸಾಮಂತ ರಾಜರುಗಳು, ಸಾಮಂತ ರಾಜರು, ದಳವಾಯಿಗಳು, ಪಾಳೇಗಾರರು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಉಚಿತ ಶಿಕ್ಷಣ ನೀಡುತ್ತಾ ಮಾನವನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶಿಕ್ಷಣ ಕ್ಷೇತ್ರ ಪ್ರಮುಖ ಪಾತ್ರ ವಹಿಸುವುದನ್ನು ನಿರೀಕ್ಷಿಸಿದರು. ಈ ಮೂಲಕ ಸ್ವಾತಂತ್ರ್ಯ ಹೋರಾಟ ರೂಪುಗೊಂಡು ಪ್ರಜಾಪ್ರಭುತ್ವ ಸ್ಥಾಪನೆಯಾಯಿತು. ಸ್ವಾತಂತ್ರ್ಯ ನಂತರ ಸರ್ಕಾರಗಳು ಉಚಿತ ಶಿಕ್ಷಣ, ಕಡ್ಡಾಯ ಶಿಕ್ಷಣ ಇತರೇ ಯೋಜನೆಗಳ ಮೂಲಕ ಸರ್ವರಿಗೂ ಶಿಕ್ಷಣ ಒದಗಿಸಲು ಮುಂದಾದವು. ಇದರಿಂದ ಒಳಗೊಳಗೆ ಅಸೂಯೆ ಪಡುತ್ತಿದ್ದ ಗುರುದಕ್ಷಿಣೆ ಕಳೆದುಕೊಂಡಿದ್ದ ಪುರೋಹಿತಶಾಹಿ ವರ್ಗ ಶಿಕ್ಷಣ ವ್ಯವಸ್ಥೆಯ ಒಳ ನುಸುಳಿ ಮಠಗಳ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಜಾತಿ ಸಂಸ್ಥೆಗಳ ಹೆಸರಿನಲ್ಲಿ ಸರ್ಕಾರದ ಮೇಲೆ ಪ್ರಭಾವ ಬೀರಿ ಅವಕಾಶ ಕಲ್ಪಿಸಿಕೊಂಡು ಮತ್ತೆ ದಕ್ಷಿಣೆ, ಗುರುದಕ್ಷಿಣೆ, ಈಗ ಡೊನೇಷನ್ ಪಡೆಯುತ್ತಾ ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಬುಡಮೇಲು ಮಾಡಿವೆ, ಇಂತಹ ಡೊನೇಷನ್ ಹಾವಳಿಯನ್ನು ನಿಯಂತ್ರಿಸಬೇಕಾದ ಸರ್ಕಾರಗಳು ನಪುಂಸಕಗೊಂಡು ಗಲ್ಲಿಗೊಂದು ಸಂಸ್ಥೆಗೆ ಅನುಮತಿ–ಅನುದಾನ ನೀಡಿ ಸರ್ಕಾರದ ಸಂಸ್ಥೆಗಳಿಗೆ ಅನುದಾನ ಮೂಲಭೂತ ಸೌಲಭ್ಯ ನೀಡದೆ ಬರಡುಗೊಳಿಸುತ್ತಾ ಬಂದಿವೆ, ಇದರಿಂದ ಪೋಷಕರು ಖಾಸಗಿ ವಿದ್ಯಾಸಂಸ್ಥೆಗಳತ್ತ ಮುಖ ಮಾಡುವಂತಾಗಿದೆ" ಎಂದು ಮುದ್ರಿಸಲಾಗಿತ್ತು.[6] ಧರಣಿಯ ನಂತರ ಬೆಟ್ಟಯ್ಯ ಕೋಟೆ ಮತ್ತು ಆಲಗೂಡು ಶಿವಕುಮಾರ್ ಹಾಗೂ ಶಂಭುಲಿಂಗಸ್ವಾಮಿ ಅವರ ಸಹಿಯೊಂದಿಗೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

**ಶಿಕ್ಷಣದ ವ್ಯಾಪಾರೀಕರಣ: ಒಂದಿಷ್ಟು ಬದಲಾವಣೆ**

ಶಿಕ್ಷಣದ ವ್ಯಾಪಾರೀಕರಣವನ್ನು ವಿರೋಧಿಸಿ ದಸಂಸ ನಡೆಸಿದ ಪ್ರತಿಭಟನೆ (11.5.2009) ಒಂದಷ್ಟು ಪರಿಣಾಮ ಬೀರಿತು. ಇದರ ಕಾರಣವಾಗಿ ಆಗಿನ ಜಿಲ್ಲಾಧಿಕಾರಿಗಳಾಗಿದ್ದ ಮಣಿವಣ್ಣನ್ ಅವರು ಎಲ್ಲಾ ಖಾಸಗಿ ಶಾಲಾ ಕಾಲೇಜುಗಳಿಗೆ ನೋಟಿಸನ್ನು ಕಳುಹಿಸಿದರು. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯಾಗಿದ್ದ ನಟರಾಜ್ ಅವರ ಮೂಲಕ ಅನುದಾನಿತ ಖಾಸಗಿ ಶಾಲಾ ಕಾಲೇಜುಗಳಲ್ಲಿ ರೋಸ್ಟರ್ ಪದ್ಧತಿ ಅನುಸರಿಸುವಂತೆಯೂ ನೋಟೀಸನ್ನು ಜಾರಿಗೊಳಿಸಲಾಯಿತು. ಡೊನೇಷನ್ ಹಾವಳಿ ಕೂಡ ಒಂದಷ್ಟು ಕಡಿಮೆಯಾಯಿತು. ಆದರೆ ಈ ಪ್ರತಿಭಟನಾ ಕಾರ್ಯಕ್ರಮವನ್ನು ಜಿಲ್ಲಾ ಕೇಂದ್ರದಲ್ಲಿ ಮಾಡಲು ಸಾಧ್ಯವಾಯಿತೇ ಹೊರತು ತಾಲೂಕು ಕೇಂದ್ರಗಳಲ್ಲಿ ವಿಸ್ತರಿಸಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಚುನಾವಣೆ ಹತ್ತಿರಕ್ಕೆ ಬಂದುದು.

ಸರ್ವೋದಯ ಕರ್ನಾಟಕ ಪಕ್ಷವನ್ನು ತಳಮಟ್ಟದಲ್ಲಿ ಪರಿಚಯಿಸುವ, ಅದರ ಆಶಯಗಳನ್ನು ಜನರಲ್ಲಿ ಬಿತ್ತುತ್ತಾ ರಾಜಕೀಯ ಪ್ರಜ್ಞೆಯನ್ನು ಮೂಡಿಸುವ ದಿಕ್ಕಿನತ್ತ ದಸಂಸ ಗಮನ ಕೊಟ್ಟ ಕಾರಣ ಈ ರೀತಿಯ ಶೈಕ್ಷಣಿಕ ಹಿನ್ನೆಲೆಯ ಚಳವಳಿ ರೂಪಿಸಲು ಸಾಧ್ಯವಾಗಲಿಲ್ಲ.

**ಉಪಸಂಹಾರ**

ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ ರಚಿಸುವ ಸಂದರ್ಭದಲ್ಲಿ ಸ್ವಾತಂತ್ರ್ಯ, ಸೋದರತ್ವ, ಸಮಾನತೆ, ಸಾಮಾಜಿಕ ನ್ಯಾಯ ಮುಂತಾದ ಉನ್ನತ ಆಶಯಗಳನ್ನು ಸಂವಿಧಾನದಲ್ಲಿ ಅಳವಡಿಸಿದರು. ತಲತಲಾಂತರಗಳಿಂದ ಶೋಷಣೆಗೊಳಪಟ್ಟ, ಅಪಮಾನಕ್ಕೀಡಾದ ದಲಿತರು, ಹಿಂದುಳಿದ ವರ್ಗಗಳಿಗೆ ಶಿಕ್ಷಣ, ರಾಜಕೀಯ, ಔದ್ಯೋಗಿಕ ಕ್ಷೇತ್ರಗಳಲ್ಲಿ ಮೀಸಲಾತಿ ಕಲ್ಪಿಸಿ ಶೋಷಿತ ಜನ ಸಮುದಾಯಗಳು ಇತರರಂತೆ ಎಲ್ಲರೊಟ್ಟಿಗೆ ಬದುಕುವ ಅವಕಾಶವನ್ನು ಒದಗಿಸಿಕೊಟ್ಟರು ಮತ್ತು ಈ ದೇಶದ ಸಂಪತ್ತು ಈ ನಾಡಿನಲ್ಲಿ ಹುಟ್ಟಿದ ಎಲ್ಲರಿಗೂ ದಕ್ಕುವಂತೆ ಮಾಡಿ ಎಲ್ಲರೂ ಸರಿಸಮನಾಗಿ ಬದುಕುವ ಅವಕಾಶ ಕಲ್ಪಿಸಿದರು. ಈ ನಿಟ್ಟಿನಲ್ಲಿ ದಲಿತ ಸಂಘರ್ಷ ಸಮಿತಿಯು ಬುದ್ಧ, ಬಸವ, ಅಂಬೇಡ್ಕರ್ ಮೊದಲಾದವರ ತತ್ವ ಸಿದ್ಧಾಂತಗಳಿಂದ ಪ್ರೇರಣೆಗೊಂಡು, ಸಮಾಜದಲ್ಲಿ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಅಸ್ಪೃಶ್ಯತೆಯನ್ನು ತೊಲಗಿಸಲು ಜಾತಿ ನಿರ್ಮೂಲನೆ ಮಾಡಲು, ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲು ಹೋರಾಟ ಮಾಡಿದೆ. ಇದಲ್ಲದೆ ದಲಿತರ ಇನಾಮ್‌ಲ್ಯಾಂಡ್, ಗೇಣಿ ಭೂಮಿ, ಬಗರ್‌ಹುಕುಂ ಭೂಮಿಗಾಗಿ ಭೂ ಹೋರಾಟವನ್ನು ರೂಪಿಸಿದೆ. ಅಂಬೇಡ್ಕರ್‌ರವರ ಕನಸಿನ ಸಮತಾ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಮತ್ತು ಅದರ ಆಶಯಗಳನ್ನು ಈಡೇರಿಸಲಿಕ್ಕೆ ದಲಿತ ಸಂಘರ್ಷ ಸಮಿತಿ ಇಂದಿಗೂ ಹೋರಾಟ ನಡೆಸುತ್ತಲೇ ಬಂದಿದೆ.

**ಕೊನೆಟಿಪ್ಪಣಿಗಳು**

1. ಕರ್ನಾಟಕ ದಲಿತ ಸಂಘರ್ಷ ಸಮಿತಿ ಕರಪತ್ರ. (1999, ಫೆಬ್ರವರಿ 22). ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ), ಮೈಸೂರು ಜಿಲ್ಲಾ ಶಾಖೆ.
2. ಹಕ್ಕೊತ್ತಾಯ ಪತ್ರ. (2006, ಏಪ್ರಿಲ್ 25). ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ.
3. ನರೇಂದ್ರಕುಮಾರ್, ಎಸ್. (2011). ದಸಂಸ ಹೋರಾಟದ ಪಯಣ. ಅಭಿರುಚಿ ಪ್ರಕಾಶನ. ಪುಟ. 42–43.
4. ಕರಪತ್ರ. (2006, ಜೂನ್ 5). ದಲಿತ ಸಂಘರ್ಷ ಸಮಿತಿ, ಮೈಸೂರು ಜಿಲ್ಲಾ ಶಾಖೆ,
5. ನರೇಂದ್ರಕುಮಾರ್, ಎಸ್. (2011). ಪೂರ್ವೋಕ್ತ. ಪುಟ. 43–44
6. ಕರಪತ್ರ. (2009, ಮೇ 11). ದಲಿತ ಸಂಘರ್ಷ ಸಮಿತಿ, ಮೈಸೂರು ಜಿಲ್ಲಾ ಶಾಖೆ.

**ಪರಾಮರ್ಶನ ಗ್ರಂಥಗಳು**


- ಮಹಾಲಿಂಗು ಕಲ್ಕುಂದ, ಕೆ.ಪಿ. (2010). *ದಲಿತ ಚಳುವಳಿಯ ಅನಿವಾರ್ಯತೆ.* ಮೈಸೂರು.
- ಕೃಷ್ಣಪ್ಪ, ಬಿ. (ಸಂ.) (1999). *ಪ್ರೊ. ಬಿ.ಕೃಷ್ಣಪ್ಪ ಚಿಂತನೆಗಳು, ಬರಹಗಳು.* ಕನ್ನಡ ಪುಸ್ತಕ ಪ್ರಾಧಿಕಾರ
- ಬೇನಾಳ, ಎಚ್.ಎಸ್. (2014). *ದಲಿತ ಚಳುವಳಿ ಮತ್ತು ಭೂ ಹೋರಾಟ.* ಸಹನಾ ಪ್ರಕಾಶನ.
- ಚಿನ್ನಸ್ವಾಮಿ ಸೋಸಲೆ, ಎನ್. (2013). *ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ.
- ದಯಾನಂದ ಮಾನೆ. (2007). ಬಾಬಾ *ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳುವಳಿ.* ಡಾ.ಬಿ.ಆರ್.ಅಂಬೇಡ್ಕರ್ ರೀಸರ್ಚ್ ಅಕಾಡೆಮಿ.